ವಿಷಯ:- ವಿಶೇಷ ಆಹಾರ ಧಾನ್ಯಗಳ ಕಾರ್ಯಕ್ರಮದಲ್ಲಿ ಖರ್ಚಾದ ಮೊತ್ತ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 267 (612)

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ವಿಶೇಷ ಆಹಾರ ಧಾನ್ಯಗಳ ಕಾರ್ಯಕ್ರಮ (ಭತ್ತ) ರಾಜ್ಯದಲ್ಲಿ ಯಾವಾಗ ಪ್ರಾರಂಭವಾಯಿತು ಮತ್ತು ಯಾವ ಜಿಲ್ಲೆಗಳಲ್ಲಿ ಇದನ್ನು ಪ್ರಾರಂಭಿಸಲಾಯಿತು?

ಆ) ಈ ಯೋಜನೆಯಲ್ಲಿ ಪ್ರತಿವರ್ಷ ಖರ್ಚು ಮಾಡಿದ ಮೊತ್ತ?

ಇ) ಈ ಯೋಜನೆಯಡಿ ಯಾವ ಯಾವ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ?

ಈ) ಅನುಷ್ಠಾನ ಅಧಿಕಾರಿಗಳು ಹೆಚ್ಚಿನ ಪ್ರಮಾಣದಲ್ಲಿ ಕಾರ್ಯಕ್ರಮದಲ್ಲಿ ಬದಲಾವಣೆ ಮಾಡಿರುವುದು ನಿಜವೇ ಹಾಗಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):-

ಅ) ವಿಶೇಷ ಆಹಾರ ಧಾನ್ಯಗಳ ಕಾರ್ಯಕ್ರಮ ಭತ್ತ (ವಿಶೇಷ ಆಹಾರ ಉತ್ಪಾದನಾ ಕಾರ್ಯಕ್ರಮ ಭತ್ತ) ರಾಜ್ಯದಲ್ಲಿ 1988-89ರಲ್ಲಿ ಪ್ರಾರಂಭಿಸಲಾಯಿತು. ಮತ್ತು ಈ ಕಾರ್ಯಕ್ರಮ 1989-90ರ ವರೆಗೆ ಅನುಷ್ಠಾನದಲ್ಲಿತ್ತು. ಈ ಕಾರ್ಯಕ್ರಮವನ್ನು 8 ಜಿಲ್ಲೆಗಳಲ್ಲಿ ಅಂದರೆ ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಕೊಡಗು, ದಕ್ಷಿಣಕನ್ನಡ, ಧಾರವಾಡ, ಉತ್ತರಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಯಿತು. ಆದರೆ 1990-91ರಿಂದ ಈ ಕಾರ್ಯಕ್ರಮದ ಹೆಸರನ್ನು ಸಮಗ್ರ ಅಕ್ಕಿ ಅಭಿವೃದ್ಧಿ ಕಾರ್ಯಕ್ರಮ ಎಂದು ಹೆಸರಿಸಿ 5 ಜಿಲ್ಲೆಗಳಾದ ಮಂಡ್ಯ, ಮೈಸೂರು, ಚಿತ್ರದುರ್ಗ ಬಳ್ಳಾರಿ, ಮತ್ತು ರಾಯಚೂರು ಜಿಲ್ಲೆಗಳಲ್ಲಿ ವಿಸ್ತರಿಸಲಾಯಿತು. ಈ ಕಾರ್ಯಕ್ರಮವು 1990-91ನೇ ಸಾಲಿನ ವರೆಗೆ ಆಚರಣೆಯಲ್ಲಿತ್ತು.

ಆ) ಯೋಜನೆಯಡಿ ವಾರ್ಷಿಕವಾರು ಖರ್ಚುಮಾಡಿದ ಮೊತ್ತ ಹೀಗಿದೆ.

ವಿಶೇಷ ಆಹಾರ ಉತ್ಪಾದನಾ ಯೋಜನೆ:

1988-89	ರೂ. 206.64 ಲಕ್ಷ
1989-90	ರೂ. 143.07 ಲಕ್ಷ

ಸಮಗ್ರ ಅಕ್ಕಿ ಅಭಿವೃದ್ಧಿ ಕಾರ್ಯಕ್ರಮ:

1990-91	ರೂ. 304.720 ಲಕ್ಷ
1991-92	ರೂ. 369.383 ಲಕ್ಷ

1992-93	ರೂ.284.460 ಲಕ್ಷ
1993-94	ರೂ.267.820 ಲಕ್ಷ

ಇ) ಈ ಯೋಜನೆಯಡಿ ಸಹಾಯಧನದಲ್ಲಿ ಬಿತ್ತನೆ ಬೀಜ, ಬೀಜ ಕಾಪು ದಾಸ್ತಾನು ವ್ಯವಸ್ಥೆ ಸಾಮೂಹಿಕ ಸಸಿಮಡಿ ನಿರ್ವಹಣೆ, ಲಘುಪೋಷಕಾಂಶಗಳು, ಮಣ್ಣು ಸುಧಾರಣೆಗಳು ಕೀಟನಾಶಕಗಳು ಮತ್ತು ಸಿಂಪರಣಾ ಯಂತ್ರಗಳು ಕೃಷಿ ಉಪಕರಣಗಳು, ಪವರ್ ಟಿಲ್ಲರ್‌ಗಳು, ಪಂಪ್ ಸೆಟ್‌ಗಳು ಹಾಗೂ ಹೊಂಡಗಳನ್ನು ನಿರ್ಮಿಸಲು ಹಾಗೂ ಕ್ಷೇತ್ರ ಪ್ರಾತ್ಯಕ್ಷಿಕೆ ರೈತರಿಗೆ ತರಬೇತಿ ಮತ್ತು ಪ್ರವಾಸ ಈ ಕಾರ್ಯಕ್ರಮಗಳನ್ನು ನಿರ್ವಹಿಸಲಾಗುತ್ತಿತ್ತು.

ಈ) ಇಲ್ಲಾ. ಆದರೆ 1992-93ನೇ ಸಾಲಿನಲ್ಲಿ ಹಿಂದಿನ ವರ್ಷದ ಮಾರ್ಗಸೂಚಿಯಂತೆ ಪ್ರಾತ್ಯಕ್ಷಿಕೆಗಳನ್ನು ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ತದನಂತರ ಕೇಂದ್ರ ಸರ್ಕಾರವು ಕಡಿಮೆ ವೆಚ್ಚದ ತಾಂತ್ರಿಕ ಪ್ರಾತ್ಯಕ್ಷಿಕೆ ಹಾಗೂ ಮಳೆಯಾಶ್ರಿತ ಭತ್ತದ ಪ್ರಾತ್ಯಕ್ಷಿಕೆ ಕೈಬಿಟ್ಟಿದ್ದು, ನಂತರ ರಾಜ್ಯದ ಪ್ರಸ್ತಾವನೆ ಮೇರೆಗೆ ಭಾರತ ಸರ್ಕಾರವು 1992-93ನೇ ಸಾಲಿನ ಅನುದಾನ ಲಭ್ಯತೆ ಮೇರೆಗೆ ಸ್ವಲ್ಪ ಮಟ್ಟಿಗೆ ಸದರಿ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಿದ್ದಕ್ಕಾಗಿ ಮಂಜೂರಾತಿ ನೀಡಿತ್ತು. ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚುವರಿಯಾಗಿ ಖರ್ಚು ಮಾಡಿದ ಮೊತ್ತಗಳು ಕ್ರಮವಾಗಿ ರೂ.4.526 ಲಕ್ಷ ಮತ್ತು ರೂ.14.46 ಲಕ್ಷಗಳಿಗೆ ಭಾರತ ಸರ್ಕಾರವು ಮನ್ನಣೆ ಮಾಡದೆ ಆಕ್ಷೇಪಿಸಿತ್ತು. ಈ ವಿಷಯದಲ್ಲಿ ರಾಜ್ಯಮಟ್ಟದ ಒಟ್ಟು ಯೋಜನೆಗಳ ಸಮನ್ವಯ ಸಮಿತಿಯ ಶಿಫಾರಸ್ಸಿನಂತೆ ಅನುಷ್ಠಾನ ಅಧಿಕಾರಿಗಳಿಂದ ವಿವರಣೆ ಕೇಳಲಾಗಿದೆ.

ವಿಷಯ:- ಕೋರಮಂಗಲ ಕ್ರೀಡಾಗ್ರಾಮದಲ್ಲಿ ನಿರ್ಮಿಸುತ್ತಿರುವ ಫ್ಲಾಟ್‌ಗಳ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 268 (224)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕೋರಮಂಗಲ ಕ್ರೀಡಾ ಗ್ರಾಮದಲ್ಲಿ ನಿರ್ಮಿಸುತ್ತಿರುವ ಒಟ್ಟು ಫ್ಲಾಟ್‌ಗಳು ಎಷ್ಟು (1ನೇ ಹಂತ ಮತ್ತು 2ನೇ ಹಂತದ ವಿವರ ಪ್ರತ್ಯೇಕವಾಗಿ ನೀಡುವುದು)?

ಆ) ಈ ಮನೆಗಳ ಪೈಕಿ ಸಾರ್ವಜನಿಕರಿಗೆ ಮಾರಾಟ ಮಾಡಲು ಉದ್ದೇಶಿಸಿರುವ ಮನೆಗಳು ಎಷ್ಟು ಇವುಗಳಲ್ಲಿ ಎಷ್ಟು ಮನೆಗಳು ಪೂರ್ಣಗೊಂಡಿವೆ. ಇವುಗಳನ್ನು ಯಾವ ದಿನಾಂಕಗಳಂದು ಪೂರೈಸಬೇಕಿತ್ತು.

ಇ) ನಿಗದಿತ ಅವಧಿಯೊಳಗೆ ನಿರ್ಮಾಣ ಪೂರ್ಣಗೊಳಿಸದೇ ಇದ್ದುದ್ದಕ್ಕಾಗಿ ಗುತ್ತಿಗೆದಾರರಿಂದ ದಂಡದ ರೂಪದಲ್ಲಿ ಎಷ್ಟು ಸಂಗ್ರಹಿಸಬೇಕಾಗಿತ್ತು? ಎಷ್ಟು ಹಣ